ಊಟ ಮಾಡಿದರು. ಆಗ ನನಗೆ ಈ ಸಮಾಜವಾದಿ ಚಿಂತಕರು, ಅವರ ಸಿದ್ಧಾಂತಗಳು ಇತ್ಯಾದಿ ಬಗ್ಗೆ ಅಷ್ಟೇನೂ ಗೊತ್ತಿರಲಿಲ್ಲ... ನಾನು ಆಗಿನ್ನೂ ಅವಕ್ಕೆಲ್ಲ ಹೊಂದಿಕೊಳ್ಳಬೇಕಿತ್ತು. ಹಾಗಾಗಿ, ರೊಮಾ ಮಿತ್ರ ಅವರ ಜೊತೆ ನಾನು ತುಂಬ ಮಾತುಕತೆ, ಚರ್ಚೆ ಮಾಡಲು ಆಗಲಿಲ್ಲ. ಆದರೆ ಅವರು ತುಂಬ ದೊಡ್ಡವರು ಅನ್ನೋ ಗೌರವ, ಪ್ರೀತಿ ಇತ್ತು. ರೊಮಾ ಮಿತ್ರ ಅವರ ಸಮಕ್ಷಮದಲ್ಲಿ ನಮ್ಮ ಪರಿಚಿತರಾಗಿದ್ದ ಮಹದೇವಮೂರ್ತಿ ಮತ್ತು ಸೂಪ್ರಬೇಗಂ ಅವರ ಮದುವೆಯಾಯಿತು. ಅಂತರಧರ್ಮೀಯ ವಿವಾಹ ಆದ್ದರಿಂದ ಆ ಕಾಲಕ್ಕೆ ಈ ಮದುವೆಗೆ ಬಹಳ ವಿರೋಧ ಇತ್ತು. ಆದರೆ ಏನೂ ತೊಂದರೆ ಆಗದ ಹಾಗೆ ಮದುವೆಯಾಯ್ತು.

ಚಿಂತಕರೂ, ಹೋರಾಟಗಾರರೂ ಆಗಿದ್ದ ಕಿಶನ್ ಪಟ್ನಾಯಕ್ ಅವರು ಒಮ್ಮೆ ಮನೆಗೆ ಬಂದಿದ್ದರು. ಅಷ್ಟು ದೊಡ್ಡವರು ಅದೆಷ್ಟು ಸಹಜವಾಗಿ ನಮ್ಮ ಜೊತೆ ಬೆರೆತು ಇದ್ದರು ಅಂತ ನೆನೆದರೆ ಎದೆ ತುಂಬಿ ಬರುತ್ತೆ. ಇನ್ನೊಂದು ಸರ್ತಿ 1975ರ ತುರ್ತುಪರಿಸ್ಥಿತಿ ಹೊತ್ತಲ್ಲಿ ಬಂದಿದ್ದರು. ತುರ್ತುಪರಿಸ್ಥಿತಿ ಸಂದರ್ಭದಲ್ಲಿ ನಾವು ಸರ್ಕಾರದ ವಿರುದ್ಧ ಚಟುವಟಿಕೆಗಳನ್ನ ಮಾಡ್ತಾ ಇದ್ದೀವಿ ಅಂತ ಸಿಐಡಿಗಳಿಗೆ ನಮ್ಮ ಮೇಲೆ ಕಣ್ಣಿತ್ತು. ನಾವು ಉಪಾಯ ಮಾಡಿ ಕಿಶನ್ ಅವರನ್ನ ಯಾವುದೋ ಹೋಟೆಲ್ ಒಂದರಲ್ಲಿ ಬೇರೆ ಹೆಸರಿನಲ್ಲಿ ರೂಮು ಮಾಡಿ ಇರಿಸಿ, ನಂತರ ದುಡ್ಡು ಒಟ್ಟು ಮಾಡಿ ದೆಹಲಿಗೆ ಟಿಕೆಟ್ ತೆಗೆದು ಕಳುಹಿಸಿಕೊಟ್ಟಿದ್ದೆವು. ಇಂತಹ ಅನುಭವಗಳೆಲ್ಲ ನನಗೆ ಕೇವಲ ನನ್ನ ಬಗ್ಗೆ ಮಾತ್ರ ಯೋಚಿಸೋದನ್ನು ಬಿಟ್ಟು ಹೊರಗಿನ ಪ್ರಪಂಚಕ್ಕೂ ದಾರಿ ತೋರಿಸಿದವು... ಇದೊಂದು ಅನುಭವ ಹೇಳಬೇಕು: 1967ನೇ ಇಸವಿ ಇರಬೇಕು... ಐತಿಹಾಸಿಕ ಸಂದರ್ಭದಲ್ಲಿ ನಾನು ಶಾಂತವೇರಿ ಗೋಪಾಲಗೌಡರನ್ನು ವಿಧಾನಸಭೆಯಲ್ಲಿ ನೋಡಿದೆ. ಆಗವರು ಎಂ.ಎಲ್.ಎ. ಆಗಿದ್ದರು. ವಿಧಾನಸೌಧದಲ್ಲಿ ಕಲಾಪಗಳು ಹೇಗೆ ನಡೀತಾವೆ ನೋಡಬೇಕು ಅಂತ ನನಗೆ ಆಸೆ ಆಯ್ತು. ನನ್ನ ಚಿಕ್ಕಪ್ಪ ನೀಲೇಗೌಡ ಅವರು ಆಗ ಎಂ.ಎಲ್.ಎ. ಆಗಿದ್ದರು. ಹಾಗಾಗಿ ನನಗೆ ಅಲ್ಲಿಗೆ ಹೋಗಲು ಪಾಸ್ ಸಿಕ್ತು. ವೈಕುಂಠ ಬಾಳಿಗಾ ಅವರು ಆಗ ಸ್ಪೀಕರ್ ಆಗಿದ್ರು. ಗೋಪಾಲಗೌಡರು ಅವತ್ತು ಮಾತಾಡಿದ ರೀತಿ, ಆ ಕಮಿಟ್‌ಮೆಂಟ್ ನೋಡಿ ರೋಮಾಂಚನ ಆಯ್ತು. ಅವರು ಮೈಸೂರು ಮಹಾರಾಜರ ವಿರುದ್ಧದ ಪ್ರತಿಭಟನೆ ಬಗ್ಗೆ ಮಾತಾಡ್ತಾ ಕೋಪಗೊಂಡು ತಮ್ಮ ಕೈಯಲ್ಲಿದ್ದ ಟಿಪ್ಪಣಿ ಕಾಗದಗಳನ್ನ ಪರಪರ ಹರಿದು ನೆಲಕ್ಕೆ ಹಾಕಿ, ಕಾಲಲ್ಲಿ ಹೊಸಕಿ ಸಭಾತ್ಯಾಗ ಮಾಡಿದರು. ಅಬ್ಬಾ! ಅದನ್ನೆಲ್ಲ ಕಣ್ಣಾರೆ ನೋಡಿದ್ದು ಏನೋ ವಿಚಿತ್ರ ಅನುಭವ. ಆ ಧೈರ್ಯ, ಬದ್ಧತೆಯೆಲ್ಲ ಈಗೆಲ್ಲಿದೆ? ಅಷ್ಟು ಧೈರ್ಯ ಒಬ್ಬ ಮನುಷ್ಯನಿಗೆ ಬರೋದು ಪ್ರಾಮಾಣಿಕತೆಯಿಂದ ಮಾತ್ರ, ಜೊತೆಗೆ ಆತ್ಮಗೌರವ ಇರಬೇಕು. ಇಂಥ ಎಷ್ಟೋ ಅನುಭವಗಳನ್ನು ನನಗೆ ಬದುಕು ಕಲಿಸಿದೆ.

**◆ ‘ಪುಸ್ತಕ ಪ್ರಕಾಶನ’ ಶುರುವಾದದ್ದು ಹೇಗೆ? ಇದರ ಚಟುವಟಿಕೆಗಳಲ್ಲಿ ನಿಮ್ಮ ಪಾಲ್ಗೊಳ್ಳುವಿಕೆ ಬಗ್ಗೆ ಹೇಳಿ.**

ತೇಜಸ್ವಿ ಅವರ ಲೇಖನ, ಕತೆಗಳು ‘ಲಂಕೇಶ್ ಪತ್ರಿಕೆ’ಯಲ್ಲಿ ನಿರಂತರವಾಗಿ ಪ್ರಕಟ ಆಗ್ತಾ ಇದ್ದವು. ಲಂಕೇಶ್ ಅವರು ತಮ್ಮ ‘ಪತ್ರಿಕೆ ಪ್ರಕಾಶನ’ದಿಂದ ತೇಜಸ್ವಿ ಅವರ ಒಂದು ಪುಸ್ತಕವನ್ನ ಪ್ರಕಟ ಮಾಡಿದರು. ಅದರ ನಂತರ ಬರೆದ ಎಲ್ಲವೂ ಪುಸ್ತಕ ರೂಪದಲ್ಲಿ ಬರದೆ ಹಾಗೇ ಇದ್ದವು. ತೇಜಸ್ವಿ ಮತ್ತು ಶ್ರೀರಾಮ್ ಇಬ್ಬರಿಗೂ ಪ್ರಕಟಣಾ ಸಂಸ್ಥೆ ಒಂದನ್ನು ಮಾಡಬೇಕು ಅಂತ ಬಹಳ ಕಾಲದಿಂದ ಆಸೆ ಇತ್ತು. ಹೀಗಾಗಿ 1991ರಲ್ಲಿ ‘ಪುಸ್ತಕ ಪ್ರಕಾಶನ’ ಅಂತ ಶುರು ಮಾಡಿ, ಮೊದಲಿಗೆ ತೇಜಸ್ವಿಯವರ ‘ಪರಿಸರದ ಕತೆಗಳು’ ಪುಸ್ತಕವನ್ನು ಹೊರ ತಂದೆವು. ತೇಜಸ್ವಿ, ಶ್ರೀರಾಮ್ ಜೊತೆಗೆ ರಾಘವೇಂದ್ರ ಅವರು ಒಟ್ಟಾಗಿ ಪ್ರಕಾಶನದ ಎಲ್ಲ ಕೆಲಸಗಳನ್ನು ನಿಭಾಯಿಸುತ್ತ ಬಂದರು. ಪ್ರಕಟಣಾ ಕೆಲಸದಲ್ಲಿ ನನಗೆ ಇಂತದ್ದು ಮಾಡಲೇಬೇಕು ಅನ್ನುವ ಯಾವ ನಿರ್ದಿಷ್ಟ ಜವಾಬ್ದಾರಿಗಳೂ ಇರಲಿಲ್ಲ. ಚಿಕ್ಕಪುಟ್ಟ ನಿರ್ವಹಣಾ ಕೆಲಸಗಳನ್ನ ಆಗಿಂದಲೂ ಮಾಡ್ತಾ ಬಂದಿದ್ದೇನೆ. ಇದಕ್ಕೆ ಇನ್ನೂ ಒಂದು ಕಾರಣ ಇದೆ, ಪ್ರಕಾಶನ ಸಂಸ್ಥೆ ಶುರು ಆದ ಕಾಲದಲ್ಲಿ ನನ್ನ ಬಹುಪಾಲು ಸಮಯ ಕೃಷಿ ಕೆಲಸಕ್ಕೆ ಹೋಗ್ತಾ ಇತ್ತು. ಶ್ರೀರಂಗಪಟ್ಟಣದ ಸಮೀಪ ನನ್ನ ಪಾಲಿಗೆ ಬಂದ ಸ್ವಲ್ಪ ಕೃಷಿ ಭೂಮಿಯಲ್ಲಿ ನಾನು ಭತ್ತ ಬೆಳೀತಿದ್ದೆ. ಮಧ್ಯಾಹ್ನದ ಹೊತ್ತಿಗೆ ಕೆಲಸದವರೆಲ್ಲ ಹೊರಟು